# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

ಎಸ್‌ಸಿ. 258/2023

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ ಶ್ರೀ ರಮೇಶ್ | | ಪ್ರಮಾಣ ಮಾಡಿಸಿದ ದಿನಾಂಕಃ |
| ತಂದೆ/ಗಂಡನ ಹೆಸರು | ಃ ಶ್ರೀ ಚಿಕ್ಕನಿಂಗೇಗೌಡ | | 24.07.2024 |
| ವಯಸ್ಸು | ಃ 40 ವರ್ಷ | | |
| ವೃತ್ತಿ | ಃ ವ್ಯವಸಾಯ | ಪ್ರಾ.ಸಾ. ಃ 03 | |
| ವಾಸಸ್ಥಳ | ಃ ಕೆರೆತೊಣ್ಣೂರು | ಚಾ.ಸಾ. ಃ 09 | |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ಚಾ.ಸಾ-1 ರಾಮೇಗೌಡ ನಮ್ಮ ಗ್ರಾಮದವರೇ ಇರುತ್ತಾರೆ. ರಾಮೇಗೌಡರ ಹೆಂಡತಿ ಮಮತಾ ಇವರ ಪರಿಚಯ ಇದೆ. ಮಮತಾ ಈಗ ಮರಣಹೊಂದಿದ್ದಾರೆ. ಈಗ 1 ವರ್ಷದ ಹಿಂದೆ ಒಂದು ದಿನ ನಾನು ವಸಂತ ಎನ್ನುವವರ ಟೀ ಅಂಗಡಿ ಬಳಿ ಹೋದಾಗ ಚಾ.ಸಾ-1 ರಾಮೇಗೌಡ ಇವರ ಹೆಂಡತಿ ಮೈಸೂರು ಬಳಿ ಇರುವ ಸಿದ್ದಲಿಂಗಪುರದಲ್ಲಿ ಕೊಲೆಯಾಗಿರುವುದಾಗಿ ಮಾತನಾಡಿಕೊಳ್ಳುತ್ತಿದ್ದರು ಮರುದಿನ ಮೈಸೂರಿನ ಆಸ್ಪತ್ರೆಗೆ ಆ ಶವವನ್ನು ನೋಡಲು ಹೋಗಿದ್ದೆ ಆ ಕಾಲಕ್ಕೆ ಮಮತಾ ಇವರ ಶವವನ್ನು ನೋಡಿದಾಗ ಅವರ ತಲೆಗೆ ಗಾಯವಾಗಿ ಮರಣಹೊಂದಿದ್ದರು. ಆ ಕಾಲಕ್ಕೆ ಶವ ಪಂಚನಾಮೆ ಮಾಡಿದ್ದರು. ಆ ಕಾಲಕ್ಕೆ ಮಮತಾ ಇವರು ಸಿದ್ದಲಿಂಗಪುರದ ಬೇಕರಿಗೆ ಹಣ ಕೇಳಲು ಹೋದಾಗ ಮೋಹನ್ ಕುಮಾರ್ ಎನ್ನುವವರು ಅವರನ್ನು ಕೊಲೆ ಮಾಡಿದ್ದಾರೆ ಎಂದು ಗೊತ್ತಾಗಿತ್ತು.

SC No. 258/2023
PW-03

<u>ಪಾಟೀ ಸವಾಲು ಃ ಆರೋಪಿ ಪರ ವಕೀಲರಾದ ಶ್ರೀ ಜೆ.ಪಿ.ಸಿ ವಕೀಲರ ಪರವಾಗಿ ಎಂ.ಕೆ ವಕೀಲ ರವರಿಂದಃ-</u>

2. ಚಾ.ಸಾ–1 ರಾಮೇಗೌಡ ಮೃತ ಮಮತಾ ಇವರ ಗಂಡ ಇದ್ದು ಅವರು ನಮ್ಮ ಗ್ರಾಮದವರೇ ಇರುತ್ತಾರೆ. ಚಾ.ಸಾ–1 ರಾಮೇಗೌಡ ನನ್ನ ಸ್ನೇಹಿತರು ಎಂದರೆ ಸರಿಯಲ್ಲ. ಕೆ.ಆರ್.ಆಸ್ಪತ್ರೆಯಲ್ಲಿ ನಾನು ಮೃತಳ ಶವವನ್ನು ನೋಡಿದ್ದೆ. ಆ ದಿನ ಬೆಳಗ್ಗೆ 8 ರಿಂದ 10 ಗಂಟೆವರೆಗೆ ನಾನು ಆಸ್ಪತ್ರೆಯಲ್ಲಿದ್ದೆ. ನಾನೇ ಸ್ವತಃ ಕೆ.ಆರ್.ಆಸ್ಪತ್ರೆಗೆ ಹೋಗಿದ್ದೆ. ಆ ಶವ ಮಹಜರ್ ಕಾಲಕ್ಕೆ ನಾನು ಸಹಿ ಮಾಡಿಲ್ಲ. ಆ ಮಹಜರ್ ಕಾಲಕ್ಕೆ ಅಂದಾಜು 50 ಜನ ಸೇರಿದ್ದರು. ಆ ದಿನ ನಾನು ಆಸ್ಪತ್ರೆಗೆ ಹೋಗೇ ಇಲ್ಲ ಎಂದರೆ ಸರಿಯಲ್ಲ. ಅದೇ ಕಾರಣಕ್ಕೆ ನನ್ನ ಸಹಿ ಪಡೆದಿಲ್ಲ ಎಂದರೆ ಸರಿಯಲ್ಲ. ಅದೇ ಕಾರಣಕ್ಕೆ ಮಹಜರ್ ಕಾಲಕ್ಕೆ ತೆಗೆದ ಪೊಟೋದಲ್ಲಿ ನಾನು ಇಲ್ಲ ಎಂದರೆ ಸರಿಯಲ್ಲ. ಶವ ಮಹಜರ್ ನಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ. ಶವ ಮಹಜರ್ ಕಾಲಕ್ಕೆ ನಾನು ಹಾಜರಿರದೇ ಇದ್ದರು ಸಹ ಚಾ.ಸಾ–1 ರಾಮೇಗೌಡರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ- ಇಲ್ಲ.</u>

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ ಎ ಒ.,

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು